ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 24–11–2021

# ಪತ್ರಿಕಾ ಪ್ರಕಟಣೆ

**PRESS RELEASE**

## ಪುಸ್ತಕ ಬಹುಮಾನಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ):

ಕರ್ನಾಟಕ ನಾಟಕ ಅಕಾಡೆಮಿಯು 2020ನೇ ಸಾಲಿನಲ್ಲಿ ಪ್ರಕಟವಾಗಿರುವ ರಂಗಭೂಮಿಗೆ ಸಂಬಂಧಿಸಿದ ಕೃತಿಗಳಿಗೆ ಪುಸ್ತಕ ಬಹುಮಾನ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕೃತಿಗಳು ಜನವರಿ 2020ರಿಂದ ಡಿಸೆಂಬರ್ 2020ರೊಳಗೆ ಮುದ್ರಣವಾಗಿರಬೇಕು. ಕೃತಿಯ ತಾಂತ್ರಿಕ ಪುಟದಲ್ಲಿ ಮುದ್ರಣ ವರ್ಷವನ್ನು ನಮೂದಿಸಿರಬೇಕು. ಕೃತಿಗಳು ಸಂಶೋಧನಾ ಪ್ರಬಂಧವಾಗಿರಬಾರದು. ಪುಸ್ತಕಗಳು ಯಾವುದೇ ಪದವಿ ಪಿಹೆಚ್‌ಡಿ ಮತ್ತು ಪಠ್ಯಪುಸ್ತಕಕ್ಕೆ ಸಿದ್ಧಪಡಿಸಿದ ವಿಷಯವಾಗಿರಬಾರದು. ಕಳುಹಿಸಲ್ಪಡುವ ಕೃತಿ ನಾಟಕವಾಗಿರಬಾರದು, ರಂಗಸಂಬಂಧಿ ವಸ್ತುವುಳ್ಳದ್ದಾಗಿರಬೇಕು. ಬಹುಮಾನವನ್ನು ಲೇಖಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನೀಡಲಾಗುವುದು.

ಆಸಕ್ತ ಲೇಖಕರು ತಮ್ಮ ಹೆಸರು, ವಿಳಾಸ, ಕೃತಿಗಳ ಪ್ರಕಟಣೆ ವರ್ಷ, ಪುಸ್ತಕದ ನಾಲ್ಕು ಪ್ರತಿಗಳೊಂದಿಗೆ ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560002 ಇವರಿಗೆ ಡಿಸೆಂಬರ್ 15, 2021 ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08022237484 ನ್ನು ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಶಿವಮೊಗ್ಗ ಜಿಲ್ಲೆಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಘಟಕದ ವಿವಿಧ ನ್ಯಾಯಾಲಯಗಳಲ್ಲಿ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ) :

ಶಿವಮೊಗ್ಗ ಜಿಲ್ಲೆಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಘಟಕದ ವಿವಿಧ ನ್ಯಾಯಾಲಯಗಳಲ್ಲಿ ಖಾಲಿ ಇರುವ ಪ್ರೋಸೆಸ್ ಜಾರಿಕಾರ ಒಟ್ಟು 07 ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಶಿವಮೊಗ್ಗ ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್ https://districts.ecourts.gov.in/shivamogga-onlinerecruitment ಅಥವಾ http://karnatakajudiciary.kar.nic.in/districtrecruitment.asp ಲಿಂಕ್ ಮೂಲಕ ಆನ್ ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ದಿನಾಂಕ: 30–12–2021 ಕೊನೆಯ ದಿನವಾಗಿರುತ್ತದೆ.

ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕಡೆಯ ದಿನಾಂಕದ ಒಳಗಾಗಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ, ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ವಾಹನ ಚಾಲನೆಯ ಲೈಸನ್ಸ್ ಇರುವವರಿಗೆ ಆದ್ಯತೆ ನೀಡಲಾಗುವುದು.

ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕನಿಷ್ಠ 18 ವರ್ಷ ವಯೋಮಿತಿ ಹೊಂದಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ –1 ರ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ 40 ವರ್ಷ ಪ್ರವರ್ಗ 2–ಎ, 2–ಬಿ, 3–ಎ ಮತ್ತು 3–ಬಿ ಗಳಿಗೆ ಸೇರಿದ ಅಭ್ಯರ್ಥಿಗಳಿಗೆ 38 ವರ್ಷ ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 35 ವರ್ಷ. ಹೆಚ್ಚಿನ ಮಾಹಿತಿಯನ್ನು https://districts.ecourts.gov.in/shivamogga-onlinerecruitment ವೆಬ್‌ಸೈಟ್‌ಗೆ ಭೇಟಿ ನೀಡಿ ಪಡೆಯಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ನೀರಿನ ಅದಾಲತ್

ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ) :

ಬೆಂಗಳೂರು ಜಲಮಂಡಳಿಯು **(ದಕ್ಷಿಣ ವಿಲೇಜ್)–2, (ಆಗ್ನೇಯ–5), (ಪಶ್ಚಿಮ ವಿಲೇಜ್)–1, (ನೈರುತ್ಯ)–4, (ಪೂರ್ವ ವಿಲೇಜ್–3), (ಪೂರ್ವ ವಿಲೇಜ್–1), (ವಾಯುವ್ಯ–5), (ಈಶಾನ್ಯ–3) ಮತ್ತು (ಉತ್ತರ–1)** ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ನೀರಿನ ಅದಾಲತ್‌ನ್ನು ನವೆಂಬರ್ 25, 2021 ಗುರುವಾರ ದಂದು ಬೆಳಿಗ್ಗೆ 9.30 ರಿಂದ 11:00 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916 ಗೆ ಕರೆಮಾಡಿ ದೂರು ದಾಖಲಿಸಬಹುದು ಹಾಗೂ ವಾಟ್ಸ್‌ಆಪ್ ಸಂಖ್ಯೆ: 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದಾಗಿದೆ. ಸಾರ್ವಜನಿಕರು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Water Adalath

Bengaluru, November (Karnataka Information):

BWSSB water Adalath is being held on 25.11.2021 in **(South Village-2), (South East-5), (West Village-1), (South West-4), (East Village-3), (East Village-1), (North West-5), (North East-3), and (North-1)** sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues.

For any problems regarding the water supply and all, publics can contact 24x 7 call centre: helpline number: 1916 & complaints can also be filed by message through whats app no: 8762228888. Public can utilize this adalath facilities to solve the problems regarding water

supply. public are requested to follow all precautionary measures according to **Covid-19 Re-open** guidelines while attending the adalath says Official Press Release.

## ಬಿಲ್ ಪಾವತಿಸದ ಸರ್ಕಾರಿ ಕಚೇರಿಗಳಿಗೆ ಬೆ.ವಿ.ಕಂ ಎಚ್ಚರಿಕೆ

ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ) :

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ರಾಜಾಜಿನಗರದ ವಿಭಾಗದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವು ಸರ್ಕಾರಿ ಇಲಾಖೆಗಳ ಕಚೇರಿಗಳು ಬಿಲ್ ಪಾವತಿ ಮಾಡದಿರುವ ಕುರಿತು ಪ್ರಕಟಣೆ ನೀಡಿದೆ.

ರಾಜಾಜಿನಗರದ ವಿಭಾಗದ ವ್ಯಾಪ್ತಿಗೆ ಬರುವ ಸರ್ಕಾರಿ ಸ್ವಾಮ್ಯದ ಕಛೇರಿ ವ್ಯಾಪ್ತಿಯಲ್ಲಿ ಸಕ್ರಿಯವಾಗಿ ಇರುವ ಸಾರ್ವಜನಿಕ ಕುಡಿಯುವ ನೀರು ಮತ್ತು ಬೀದಿ ದೀಪ ವಿದ್ಯುತ್ ಸರಬರಾಜು ಸ್ಥಾವರಗಳಲ್ಲಿ ಸೆಪ್ಟೆಂಬರ್ –2021ರ ಅಂತ್ಯಕ್ಕೆ ಬಿ.ಬಿ.ಎಂ.ಪಿ ನೀರು ಸರಬರಾಜು ಬಿಲ್ಲು ರೂ. 40,60,88044/–, ಬಿ.ಡಬ್ಲ್ಯೂ.ಎಸ್.ಎಸ್.ಬಿ ರೂ. 35,00,13,865/–, ಬಿ.ಡಿ.ಎ ನೀರು ಸರಬರಾಜು ಬಿಲ್ಲು ರೂ. 4,18,686/– ಮತ್ತು ಬೀದಿ ದೀಪ ಬಿಲ್ಲು ರೂ. 64,17,699/– ಒಟ್ಟು ರೂ. 68,36,385/–, ಬಿ.ಬಿ.ಎಂ.ಪಿ ತೋಟಗಾರಿಕೆ ಇಲಾಖೆ ರೂ. 61,72,659/–, ಪಂಚಾಯತ್ ರಾಜ್ ಇಲಾಖೆ ರೂ.1,07,38,936/–, ಪಿ.ಡಬ್ಲ್ಯೂಡಿ ರೂ. 55,602/–, ಬೆಂಗಳೂರು ನಿರಾಶ್ರಿತರ ಕೇಂದ್ರ ರೂ. 1,56,243/– ರೂಗಳು ಈ ಇಲಾಖೆಗಳು ಬಿಲ್ಲು ಪಾವತಿಸಿರುವುದಿಲ್ಲ.

ಸಂಸ್ಥೆಯು ಹಲವಾರು ಬಾರಿ ಪತ್ರ ವ್ಯವಹಾರ ಮಾಡಲಾಗಿದ್ದರೂ ಸಹ ಸರ್ಕಾರಿ ಸ್ವಾಮ್ಯದ ಕಚೇರಿಯ ವತಿಯಿಂದ ವಿದ್ಯುತ್ ಬಿಲ್ಲು ಪಾವತಿಗೆ ಯಾವುದೇ ಕ್ರಮ ಕೈಗೊಂಡಿಲ್ಲದ ಕಾರಣ, ವಿದ್ಯುತ್ ಸಂಪರ್ಕ ಕಡಿತಗೊಳಿಸುವುದು ಅನಿವಾರ್ಯ ಕ್ರಮವಾಗಿರುತ್ತದೆ. ವಿದ್ಯುತ್ ನಿಲುಗಡೆಯಂತಹ ಕ್ರಮಗಳಿಂದ ಸಾರ್ವಜನಿಕರಿಗೆ ಉಂಟಾಗುವಂತಹ ಯಾವುದೇ ರೀತಿಯ ತೊಂದರೆ ಹಾಗೂ ಅನಾನುಕೂಲತೆಗಳಿಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ಜವಾಬ್ದಾರಿಯಾಗಿರುವುದಿಲ್ಲ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ನಾಡೋಜ ಎಚ್. ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ

ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ) :

ನಾಡಿನ ಪ್ರಸಿದ್ಧ ಸಾಹಿತಿ, ಪ್ರವಾಸಿ ಕಂಡ ಇಂಡಿಯಾ ಮಾಲಿಕೆಯ ಕರ್ತೃ, ಜಾನಪದಲೋಕ ನಿರ್ಮಾತೃ ನಾಡೋಜ ಎಚ್.ಎಲ್. ನಾಗೇಗೌಡರ ನೆನಪಿನಲ್ಲಿ ಅವರು ಕಟ್ಟಿ ಬೆಳೆಸಿದ 'ಕರ್ನಾಟಕ ಜಾನಪದ ಪರಿಷತ್ತು' ಸಂಸ್ಥೆ ಪ್ರತಿ ವರ್ಷ ರಾಷ್ಟ್ರಮಟ್ಟದ ಜನಪದ ಕಲಾವಿದರನ್ನು ಗುರುತಿಸಿ ಒಂದು ಲಕ್ಷ ರೂ.ಗಳನ್ನೊಳಗೊಂಡ ಪ್ರಶಸ್ತಿ ನೀಡುತ್ತದೆ.

ಎಚ್. ಎಲ್. ನಾಗೇಗೌಡರಿಗೆ ನೂರು ವಸಂತಗಳು ತುಂಬಿದ ನೆನಪಿನಲ್ಲಿ 2015ರಿಂದ ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದಲ್ಲಿ ಜಾನಪದ ಕ್ಷೇತ್ರದಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಗುರುತಿಸಿ, ಅವರನ್ನು ಸನ್ಮಾನಿಸುವ ಸುಸಂಸ್ಕೃತಿಯನ್ನು ಪರಿಷತ್ತು ಹಮ್ಮಿಕೊಂಡು, ಅದರಂತೆ, ಈ ಮೊದಲು 2015ರಲ್ಲಿ ಪದ್ಮಶ್ರೀ, ಪದ್ಮಭೂಷಣ ಪಾಂಡವಾನಿ ಕಲಾವಿದೆ ಶ್ರೀ ತೀಜನ್ ಬಾಯಿ ಅವರಿಗೆ ನೀಡಲಾಗಿತ್ತು. 2016ರಲ್ಲಿ ಮನಿಪಾಲದ ಹಸ್ತಶಿಲ್ಪ ಟ್ರಸ್ಟ್‌ನ ರೂವಾರಿ ಶ್ರೀ ವಿಜಯನಾಥ ಶೆಣೈ ಅವರಿಗೆ ನೀಡಲಾಗಿತ್ತು. 2017ರಲ್ಲಿ ರಾಜಸ್ಥಾನಿ ಜನಪದ ಸೂಫಿ ಹಾಗೂ ಕಬೀರ್ ತಾತ್ವಿಕ ಹಿನ್ನೆಲೆಯ ಪ್ರಸಿದ್ಧ ಸಂಗೀತ ಕಲಾವಿದರು, ದೇಶ ವಿದೇಶಗಳಲ್ಲಿ ಸಾವಿರಾರು ಸಂಗೀತ ಕಛೇರಿಗಳನ್ನು ನೀಡಿ ಜನಪದ ಕಲೆಯನ್ನು ಉಳಿಸಿ ಬೆಳೆಸುವತ್ತ ಶ್ರಮಿಸುತ್ತಿರುವ ಶ್ರೀ ಮುಖ್ತಿಯಾರ್ ಅಲಿ ನೀಡಲಾಗಿತ್ತು. 2018ರಲ್ಲಿ ಬಳ್ಳಾರಿ ಜಿಲ್ಲೆಯ ತೊಗಲು ಗೊಂಬೆ ಯಕ್ಷಗಾನ ಕಲಾವಿದರಾದ ನಾಡೋಜ ಶ್ರೀ ಬೆಳಗಲ್ಲು ವೀರಣ್ಣ ಅವರಿಗೆ ನೀಡಲಾಗಿತ್ತು. 2019ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಪ್ರಸಿದ್ಧ ವೀರಗಾಸೆ ಕಲಾವಿದರಾದ ಶ್ರೀ ಎಂ. ಆರ್. ಬಸಪ್ಪ ಅವರಿಗೆ ಈ ಪ್ರಶಸ್ತಿ ನೀಡಲಾಗಿತ್ತು. 2020ರಲ್ಲಿ ಜನಾಬ್ ಮೊಹಮ್ಮದ್ ಸಲೀಂ ಹಸನ್ ಚಿಸ್ತಿ ಅವರು ಎಚ್.ಎಲ್. ನಾಗೇಗೌಡ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

**"ಜನಾಬ್ ಮೊಹಮ್ಮದ್ ಸಲೀಂ ಹಸನ್ ಚಿಸ್ತಿ" –**

ಉತ್ತರ ಪ್ರದೇಶದ ಉಸ್ತಾದ್ ಸಲೀಂ ಹಸನ್ ಚಿಸ್ತಿ ಅವರು ಭಾರತದ ಸೂಫಿ ಸಂಗೀತದ ಅಗ್ರಮಾನ್ಯ ಹೆಸರುಗಳಲ್ಲಿ ಒಬ್ಬರು. ಆಗ್ರಾದ ಫತೇಪುರ್ ಸಿಕ್ರಿ ದರ್ಗಾದಲ್ಲಿ ಮತ್ತು ರಾಜ ಅಕ್ಬರ್‌ನ ದರಬಾರಿನಲ್ಲಿ ಸೂಫಿ ಸಂಗೀತದ ಪರಂಪರೆಯನ್ನು ಸುಶ್ರಾವ್ಯವಾಗಿ ಹಾಡುತ್ತಾ ಬಂದಿರುವ 17ನೇ ತಲೆಮಾರಿನವರು ಇವರು. ಫತೇಪುರ್ ಸಿಕ್ರಿಯ ಖ್ವಾಜಾ ಮೊಹಿನುದ್ದೀನ್ ಚಿಸ್ತಿ ಅವರ ಪರಂಪರೆಯಲ್ಲಿ ಪಳಗಿದ ಶೇಕ್ ಸಲೀಂ ಚಿಸ್ತಿ ಮತ್ತು ನೂರ್ ಮೊಹಮ್ಮದ್ ಚಿಸ್ತಿ ಹೆಸರಾಂತ ಸೂಫಿ ಗಾಯಕರ ಗರಡಿಯಲ್ಲಿ ವಿಭಿನ್ನ ರಾಗಗಳ ಸಂಯೋಜನೆಯಲ್ಲಿ ಕವ್ವಾಲಿಗಳನ್ನು ಹಾಡುವ ಮೊಹಮ್ಮದ್ ಸಲೀಂ ಹಸನ್ ಚಿಸ್ತಿ ಅವರಿಗೆ ಈ ಸಾಲಿನ ನಾಡೋಜ ಎಚ್. ಎಲ್. ನಾಗೇಗೌಡ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

ಶ್ರೀಯುತರು ತಮ್ಮ 17ನೇ ತಲೆಮಾರಿನಿಂದ ನಡೆಸಿಕೊಂಡು ಬಂದಿರುವ ಸೂಫಿ ಭಕ್ತಿ ಪಂಥದಲ್ಲಿ ತಮ್ಮನ್ನು ತೊಡಗಿಸಿಕೊಂಡು ಇಡೀ ಮನುಷ್ಯ ಕುಲವೇ ಒಂದು ಎಂದು ತಮ್ಮ ಸಂಗೀತದಲ್ಲಿ ಪ್ರೇಮ ಮತ್ತು ವಿಶ್ವ ಭ್ರಾತೃತ್ವವನ್ನು ಸಾರಿದ್ದಾರೆ. ಕವ್ವಾಲಿ ಸೂಫಿ ಇಸ್ಲಾಮಿಗಳ ಭಕ್ತಿಗೀತೆಯಾಗಿದ್ದು, ಇವರ ಕಲೆಯ ಮುಖಾಂತರ ಅಭಿವ್ಯಕ್ತಿಗೊಳ್ಳುತ್ತದೆ. ಹಿಂದುಸ್ಥಾನಿ ಸಂಗೀತದ ಮಿಶ್ರಣವೂ ಸೂಫಿ ಕವ್ವಾಲಿ ಹಾಡುಗಳಲ್ಲಿ ಕಾಣ ಬರುತ್ತದೆ. ಕನ್ನಡದ ಶಿಶುನಾಳ ಶರೀಫರ ನೆನಪುಗಳನ್ನು ತರುವ ಇವರ ಸಂಗೀತದಲ್ಲಿ ಸಂತನ, ದಾರ್ಶನಿಕನ ತತ್ವಗಳಿವೆ.

ಸಲೀಂ ಹಸನ್ ಚಿಸ್ತಿ ಅವರು ದೇಶ-ವಿದೇಶಗಳಲ್ಲಿ ತಮ್ಮ ಕವ್ವಾಲಿ ಸಂಗೀತವನ್ನು ಸೂಫಿ ಸಂಗೀತ ಪ್ರಿಯರಿಗೆ ಉಣಬಡಿಸಿದ್ದಾರೆ. ಅಕಾಶವಾಣಿಯ "ಎ" ಗ್ರೇಡ್ ಕಲಾವಿದರೂ ಆಗಿರುವ ಇವರು ದೂರದರ್ಶನ, ಜೀ-ಮ್ಯೂಸಿಕ್, ಟಿ-ಸಿರೀಸ್ ಇತರೆ ನೂರಾರು ಟಿವಿ ಕಾರ್ಯಕ್ರಮಗಳನ್ನು ನೀಡಿರುತ್ತಾರೆ. ಹಿಂದಿ ಸಿನೆಮಾಗಳಾದ "ಪರದೇಶ್", "ಜಿಗರಿಯಾ" ಮತ್ತು "ವಹಾಂ ತಾಜ್" ಸಿನಿಮಾಗಳಲ್ಲಿ ಇವರ ಸಂಗೀತ ಸುಧೆಯು ಪರವಶಗೊಳಿಸುವ ಮಾಧುರ್ಯ ತುಂಬಿದ ಗೀತೆಗಳು ಪ್ರಸಿದ್ಧವಾಗಿವೆ. ಇವರ ಸಂಗೀತ ಸೇವೆಯನ್ನು ಗುರುತಿಸಿ ಕ್ಯಾಲಿಫೋರ್ನಿಯಾ ಸಂಗೀತ ವಿಶ್ವವಿದ್ಯಾಲಯವು ಇವರನ್ನು ಸನ್ಮಾನಿಸಿ ಗೌರವಿಸಿದೆ. ಶ್ರೀಲಂಕಾ, ದುಬೈ, ಬ್ರಿಟನ್ ಮತ್ತು ಬಾಂಗ್ಲ ದೇಶಗಳ ಜಾಗತಿಕ ಸಂಗೀತ ವೇದಿಕೆಗಳಲ್ಲಿ ಇವರು ಸೂಫಿ ಕವ್ವಾಲಿಗಳನ್ನು ಹಾಡಿ ದಿಗ್ಗಜರೆನಿಸಿಕೊಂಡಿದ್ದಾರೆ.

ಸೂಫಿ ಸಂಗೀತ ಕಲಾಪ್ರಕಾರದಲ್ಲಿ ಅಪೂರ್ವ ಸೇವೆ ಮಾಡಿದ ಅವರ ಜೀವಮಾನದ ಸಾಧನೆಗಾಗಿ ಸೂಫಿ ಸಂಗೀತ ಕಲಾವಿದರಾದ "ಜನಾಬ್ ಮೊಹಮ್ಮದ್ ಸಲೀಂ ಹಸನ್ ಚಿಸ್ತಿ" ಅವರಿಗೆ ಕರ್ನಾಟಕ ಜಾನಪದ ಪರಿಷತ್ತು 2021ನೇ ಸಾಲಿನ ಒಂದು ಲಕ್ಷ ರೂ. ಮೌಲ್ಯದ "ನಾಡೋಜ ಎಚ್. ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ" ಯನ್ನು 27/11/2021ರ ಶನಿವಾರ ಸಂಜೆ 5.00ಗಂಟೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅತ್ಯಂತ ಸಂಭ್ರಮದಲ್ಲಿ ನೀಡಿ ಗೌರವಿಸುತ್ತಿದೆ. ಈ ಮಹನೀಯರನ್ನು ಗೌರವಿಸುವ ಕಾರ್ಯ ಕರ್ನಾಟಕ ಜಾನಪದ ಪರಿಷತ್ತಿನ್ನದಾಗಿದೆ.

ವಿಶೇಷ ಆಕರ್ಷಣೆಯಾಗಿ 'ಜನಾಬ್ ಮೊಹಮ್ಮದ್ ಸಲೀಂ ಹಸನ್ ಚಿಸ್ತಿ" ಅವರಿಂದ ಸೂಫಿ ಸಂಗೀತ ಸಂಜೆ ಕಾರ್ಯಕ್ರಮವನ್ನು ಏರ್ಪಡಿಸಿದ್ದು ಸೂಫಿ ಸಂಗೀತ ಪ್ರಿಯರಿಗೆ ವಿಶೇಷ ರಸದೌತಣವಾಗಲಿದೆ. ಜಾನಪದ ಕಲಾ ತಂಡಗಳಿಂದ ಜಾನಪದ ಕಲೆಗಳ ಪ್ರದರ್ಶನವಿದ್ದು. ಡಾ. ವಿಜಯಕುಮಾರ್ ಬಂಡ್ಲಳ್ಳಿ ಮತ್ತು ತಂಡದವರಿಂದ ಶತಕಂಠ ಗಾಯನವಿರುತ್ತದೆ. ಪರಿಷತ್ತಿನ ಪ್ರಕಟಣೆಗಳ ಮಾರಾಟ ಮತ್ತು ಜಾನಪದೀಯ ವಸ್ತು ಸಂಗ್ರಹಗಳ ಪ್ರದರ್ಶನವೂ ಇರುತ್ತದೆ.

## ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ರಾಜ್ಯಾದ್ಯಂತ ವಿದ್ಯುನ್ಮಾನ ತ್ಯಾಜ್ಯ (ಇ-ತ್ಯಾಜ್ಯ) ಜಾಗೃತಿ ಅಭಿಯಾನ

ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ) :

ಇ-ತ್ಯಾಜ್ಯ ಅಥವಾ ವಿದ್ಯುನ್ಮಾನ ತ್ಯಾಜ್ಯವು ಹಳೆಯದಾದ, ಅನಗತ್ಯವಾದ ಅಥವಾ ಮುರಿದುಹೋಗಿರುವ ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ಒಳಗೊಂಡಿದೆ. ಇ-ತ್ಯಾಜ್ಯವು ಪಾದರಸ, ಸೀಸ, ಕ್ಯಾಡ್ಮಿಯಮ್ ಬೆರಿಲಿಯಮ್, ಬ್ರೋಮಿನೇಟೆಡ್ ಜ್ವಾಲೆಯ ನಿವಾರಕಗಳು ಮುಂತಾದ ಭಾರೀ ರಾಸಾಯನಿಕಗಳನ್ನು ಒಳಗೊಂಡಿರುತ್ತದೆ, ಅದು ಜನರಿಗೆ ಮತ್ತು ಪರಿಸರಕ್ಕೆ ಹಾನಿಕಾರಕವಾಗಿದೆ. ವಿಲೇವಾರಿ ಸಮಯದಲ್ಲಿ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳನ್ನು ತಪ್ಪಾಗಿ ನಿರ್ವಹಿಸಿದಾಗ, ಭಾರೀ ರಾಸಾಯನಿಕಗಳು ನಮ್ಮ ಮಣ್ಣು, ನೀರು ಮತ್ತು ಗಾಳಿಯಲ್ಲಿ ಸೇರಿ ಪರಿಸರಕ್ಕೆ ಹಾನಿಕಾರಕ

ಹಾನಿಯನ್ನುಂಟುಮಾಡುತ್ತವೆ. ಒಮ್ಮೆ ನೆಲದಲ್ಲಿ ಎಸೆದರೆ, ಅವು ವಿಶೇಷವಾಗಿ ಬೇಸಿಗೆಯ ತಿಂಗಳುಗಳಲ್ಲಿ ಭೂಮಿಯೊಳಗೆ ಸೇರುವ ಸಾಧ್ಯತೆ ಇದ್ದು, ಇ-ತ್ಯಾಜ್ಯವು ಶಾಖಕ್ಕೆ ಒಡ್ಡಿಕೊಂಡಾಗ, ವಿಷಕಾರಿ ರಾಸಾಯನಿಕಗಳು ಗಾಳಿಯಲ್ಲಿ ಬಿಡುಗಡೆಯಾಗಿ ವಾತಾವರಣವನ್ನು ಹಾನಿಗೊಳಿಸುತ್ತವೆ. ಇ-ತ್ಯಾಜ್ಯದಿಂದ ಉಂಟಾಗುವ ದೊಡ್ಡ ಪರಿಸರ ಅಪಾಯಗಳಲ್ಲಿ ಇದು ಸಹ ಒಂದಾಗಿದೆ. ಆ ವಿಷಕಾರಿ ವಸ್ತುಗಳು ನಂತರ ಅಂತರ್ಜಲಕ್ಕೆ ಇಳಿಯಬಹುದು, ಇದು ಭೂಮಿ ಮತ್ತು ಸಮುದ್ರ ಪ್ರಾಣಿಗಳ ಮೇಲೆ ತೀವ್ರ ಪರಿಣಾಮ ಬೀರುತ್ತದೆ.

ಇಂದು ಇ-ತ್ಯಾಜ್ಯವು ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ತ್ಯಾಜ್ಯಗಳಾಗಿ ಮಾರ್ಪಟ್ಟಿದೆ. ಇತ್ತೀಚಿನ ವರ್ಷಗಳಲ್ಲಿ, ಭಾರತವು ವಿಶ್ವದಲ್ಲೇ ಮೂರನೇ ಅತಿ ಹೆಚ್ಚು ಇ-ತ್ಯಾಜ್ಯವನ್ನು ಉತ್ಪಾದಿಸುವ ದೇಶವಾಗಿದೆ. ಪರಿಸರ ಮತ್ತು ಮಾನವನ ಆರೋಗ್ಯಕ್ಕೆ ಇ-ತ್ಯಾಜ್ಯದ ಕಾರಣ ಮತ್ತು ಪರಿಣಾಮಗಳ ಬಗ್ಗೆ ಬಹಳ ಕಡಿಮೆ ಜನರು ತಿಳಿದಿರುತ್ತಾರೆ ಎಂದು ಗಮನಿಸಲಾಗಿದೆ. ಈ ದಿಕ್ಕಿನಲ್ಲಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB) ಇ-ತ್ಯಾಜ್ಯದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಬೆಂಬಲಿಸಲು ಎಲೆಕ್ಟ್ರಾನಿಕ್ ನಿರ್ಮಾಪಕರು, PRO (ಅಧಿಕೃತ ಸಂಗ್ರಹ ಸಂಸ್ಥೆಗಳು) ಮತ್ತು ಎಲೆಕ್ಟ್ರಾನಿಕ್ಸ್ ಚಿಲ್ಲರೆ ವ್ಯಾಪಾರಿ ಮಳಿಗೆಗಳು, RWAs, ULB ಕಚೇರಿಗಳು, ಕಾರ್ಪೊರೇಟ್ ಕಚೇರಿಗಳು, ಶಿಕ್ಷಣ ಸಂಸ್ಥೆಗಳೊಂದಿಗೆ ಪಾಲುದಾರಿಕೆ ಹೊಂದಿದೆ. ರಾಜ್ಯದಾದ್ಯಂತ ತ್ಯಾಜ್ಯ ಸಂಗ್ರಹ ಅಭಿಯಾನ. ಈ ರೀತಿಯ ಮೊದಲ ಕಾರ್ಯಕ್ರಮವನ್ನು ಇಂದು ಅಂದರೆ ನವೆಂಬರ್ 24, 2021 ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾದ ಡಾ॥ ಶಾಂತ ಎ. ತಿಮ್ಮಯ್ಯ, ರವರು ಉದ್ಘಾಟಿಸಿದರು.

ಒಂದು ತಿಂಗಳ ಅಭಿಯಾನದಲ್ಲಿ, ಕಾರ್ಯಾಚರಣೆ ಕ್ರಮಗಳು / ಚಟುವಟಿಕೆಗಳನ್ನು ನಡೆಸಲು ಯೋಜಿಸಲಾಗಿದೆ:

ಕರ್ನಾಟಕದ ಎಲ್ಲಾ 31 ಜಿಲ್ಲೆಗಳಲ್ಲಿ ವಿವಿಧ ಮಧ್ಯಸ್ಥಗಾರರನ್ನು ತೊಡಗಿಸಿಕೊಂಡು ಸಾಮೂಹಿಕ ಜಾಗೃತಿ ಮತ್ತು ಇ-ತ್ಯಾಜ್ಯ ಸಂಗ್ರಹ ಅಭಿಯಾನ ಮಾಡುವುದು.

ಕಾರ್ಯಾಗಾರಗಳು, ಆನ್ ಲೈನ್ ಜಾಗೃತಿ ಸ್ಟೇಷನ್‌ಗಳು, ಆಡಿಯೋ ಪ್ರಕಟಣೆಗಳು, ಸಾಮಾಜಿಕ ಮಾಧ್ಯಮಗಳಾದ Twitter, Instagram, Facebook, ರೇಡಿಯೋ ಮತ್ತು ಟಿವಿ ಸಂದರ್ಶನಗಳ ಮೂಲಕ ತೊಡಗಿಸಿಕೊಳ್ಳುವುದು, ಜಾಗೃತಿ ಅಭಿಯಾನದಲ್ಲಿ ಗರಿಷ್ಠ ವ್ಯಾಪ್ತಿಯನ್ನು ಪಡೆಯಲು ವ್ಯಾಪಕವಾಗಿ ಯೋಜಿಸಲಾಗಿದೆ.

ಇ-ತ್ಯಾಜ್ಯ ಸಮಸ್ಯೆಗಳು ಮತ್ತು ಸಂಗ್ರಹಣೆಯ ಕುರಿತು ಜಾಗೃತಿ ಜಿಂಗಲ್ ಅನ್ನು ಎಲ್ಲಾ ULB (ನಗರ ಸ್ಥಳೀಯ ಸಂಸ್ಥೆ) ತ್ಯಾಜ್ಯ ವಾಹನಗಳಲ್ಲಿ ಸಾರ್ವಜನಿಕರಿಗೆ ಸಂವೇದನಾಶೀಲ ಗೊಳಿಸಲಾಗುತ್ತದೆ.

ಸಮುದಾಯ ಅಥವಾ ULB ನಲ್ಲಿ ಇ-ತ್ಯಾಜ್ಯ ಸಂಗ್ರಹಣೆಯನ್ನು ಒಮ್ಮೆ ಮಾಡಿದ ನಂತರ, ವಿವರಗಳನ್ನು ಇ-ತ್ಯಾಜ್ಯ ಪಿಕ್ ಅಪ್ ಅಪ್ಲಿಕೇಶನ್ https://rb.gy/cknze1 ಗೆ ನಮೂದಿಸಲಾಗುತ್ತದೆ. ಇದರ ಆಧಾರದ ಮೇಲೆ, ಲಾಜಿಸ್ಟಿಕ್ಸ್ ಅನ್ನು ಪಿಕ್-ಅಪ್ ದಿನಾಂಕದಂದು ದೃಢೀಕರಣ ಸಂದೇಶದೊಂದಿಗೆ ಯೋಜಿಸಲಾಗಿದೆ.

ಪ್ರತಿ ಶನಿವಾರ, ULB ಯಿಂದ ಇ-ತ್ಯಾಜ್ಯ ಸಂಗ್ರಹಕ್ಕಾಗಿ ಪ್ರತ್ಯೇಕ ವಾಹನವನ್ನು ಆಯೋಜಿಸಲಾಗುತ್ತದೆ ಮತ್ತು ಸಂಗ್ರಹಿಸಿದ ಇ-ತ್ಯಾಜ್ಯವನ್ನು ಅವರ ULB ಕಛೇರಿಯಲ್ಲಿ ಸಂಗ್ರಹಿಸಲಾಗುತ್ತದೆ.

ಅಭಿಯಾನ ನಡೆಸಲು ಜಾಗೃತಿ ಪೋಸ್ಟರ್‌ಗಳು ಮತ್ತು SOP ಅನ್ನು ಎಲ್ಲಾ RWA ಗಳು, ಶಿಕ್ಷಣ ಸಂಸ್ಥೆಗಳೊಂದಿಗೆ ವಿವಿಧ ವೇದಿಕೆಗಳ ಮೂಲಕ ಹಂಚಿಕೊಳ್ಳಲಾಗುತ್ತದೆ.

ರಿಲಯನ್ಸ್ ಸ್ಟೋರ್, ಇವರು ಜಾಗೃತಿ ಪೋಸ್ಟರ್‌ಗಳನ್ನು ಮುದ್ರಿಸುತ್ತದೆ ಮತ್ತು ಕರ್ನಾಟಕದಾದ್ಯಂತ ತಮ್ಮ ಎಲ್ಲಾ ಮಳಿಗೆಗಳು ಮತ್ತು ವಿತರಣಾ ವಾಹನಗಳಲ್ಲಿ ಪ್ರದರ್ಶಿಸುತ್ತದೆ. ಅವರ ಮಳಿಗೆಗಳಲ್ಲಿ ಜಾಗೃತಿ ಆಡಿಯೋಗಳನ್ನು ಸಹ ಪ್ರಸಾರ ಮಾಡಲಾಗುವುದು.

ಕರೋ ಸಂಭವ, ಇವರು ಮೈಸೂರು ಪ್ರದೇಶದಲ್ಲಿ ಸಾಮಾಜಿಕ ಮಾಧ್ಯಮವನ್ನು ಬಳಸಿಕೊಂಡು ಜಾಗೃತಿ ಸಂದೇಶವನ್ನು ಹೆಚ್ಚಿಸಲು ಪ್ರತಿ ಶನಿವಾರ ಮೈಸೂರಿನಲ್ಲಿ ಜಾಗೃತಿ ಪೋಸ್ಟರ್‌ಗಳೊಂದಿಗೆ 4 ಮೊಬೈಲ್ ವಾಹನಗಳನ್ನು ಒದಗಿಸುತ್ತದೆ.

Saahas, ಇವರು ಶೂನ್ಯ ತ್ಯಾಜ್ಯ ಭಾನುವಾರ ಹೊರತುಪಡಿಸಿ ಪ್ರತಿದಿನ ಬೆಂಗಳೂರಿನ ಪ್ರತಿಯೊಬ್ಬರಿಗೂ ಜಾಗೃತಿ ಪೋಸ್ಟರ್‌ಗಳು ಮತ್ತು ಆಡಿಯೋಗಳೊಂದಿಗೆ ವಾಹನವನ್ನು ಒದಗಿಸುತ್ತದೆ. ಅಗತ್ಯವಿದ್ದಲ್ಲಿ, ಬೇಡಿಕೆಗೆ ಅನುಗುಣವಾಗಿ ಹೆಚ್ಚುವರಿ ವಾಹನಗಳನ್ನು ಒದಗಿಸಲಾಗುವುದು.

ಸೋಗೋ ಇವೇಸ್ಟ್ ಮ್ಯಾನೇಜ್ಮೆಂಟ್, ಇವರು ಮರುಬಳಕೆ ಪಾಲುದಾರರಾಗಿರುತ್ತಾರೆ ಮತ್ತು ಸಂಗ್ರಹಿಸಿದ ಎಲ್ಲಾ ಇ-ತ್ಯಾಜ್ಯ ವಸ್ತುಗಳ ಸಂಗ್ರಹಣೆ ಮತ್ತು ಮರುಬಳಕೆಯನ್ನು ಬೆಂಬಲಿಸುತ್ತದೆ.

ತಿಂಗಳಾಂತ್ಯದಲ್ಲಿ ಎಲ್ಲಾ ಪಾಲುದಾರರು ವಿದ್ಯುನ್ಮಾನ ತ್ಯಾಜ್ಯ (ಇ-ತ್ಯಾಜ್ಯ) ಅರಿವು ಅಭಿಯಾನ ಮತ್ತು ಸಂಗ್ರಹಣೆಯ ಕುರಿತು ವರದಿಯನ್ನು ಸಲ್ಲಿಸುತ್ತಾರೆ.

ಈ ವಿದ್ಯುನ್ಮಾನ ತ್ಯಾಜ್ಯ (ಇ-ತ್ಯಾಜ್ಯ) ಅರಿವು ಅಭಿಯಾನದಲ್ಲಿ KSPCB ಮತ್ತು ಅವರ ಪಾಲುದಾರರನ್ನು ಬೆಂಬಲಿಸಲು ನಾವು ಕರ್ನಾಟಕದ ಎಲ್ಲಾ ನಿವಾಸಿಗಳು ಮತ್ತು ಎಲ್ಲಾ ಇತರೆ ಪಾಲುದಾರರನ್ನು ವಿನಂತಿಸುತ್ತೇವೆ.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ : 080 25582559 ಅಥವಾ ಉಚಿತ ದೂರವಾಣಿ ಸಂಖ್ಯೆ : 1 800 258 6676/1 800 212 1434 ಅನ್ನು ಸಂಪರ್ಕಿಸಬಹುದಾಗಿದೆ.

# Launch of KSPCB’s State wide E-waste Awareness Drive

Bengaluru, November (Karnataka Information):

E-waste, or electronic waste, encompasses electrical and electronic equipment that’s outdated, unwanted, or broken. E-waste contains heavy chemicals such as mercury, lead, cadmium beryllium, brominated flame retardants etc that are harmful to people and the environment. When electronics products are mishandled during disposal, the heavy chemicals end up in our soil, water, and air causing damages to environment. Once tossed in a landfill, they’re simply being left to leach into the earth, especially during the summer months. When e-waste is exposed to the heat, toxic chemicals are released into the air damaging the atmosphere. This is one of the biggest environmental hazards of e-waste. Those toxic materials can then seep into the groundwater, affecting both land and sea animals.

Today e-waste has become the fastest-growing waste streams on the planet. Over the years, India has become the largest producer of e-waste in the World. It is noticed that very less people are aware about cause and impacts of e-waste to environment and human health. In this direction, Karnataka State Pollution Control Board (KSPCB) is partnering with Electronic Producers, PROs (authorized collection organizations) and Electronics Retailer Stores, RWAs, ULB Offices, Corporate Offices, Educational Institutions to spread awareness on e-waste and support the e-waste collection drives across the state. **This event is the first of its kind is being launched on Nov 24th 2021 by Dr Shanth A. Thimmaiah, Chairman, Karnataka State Pollution Control Board.**

During one month campaign, following **Operation Actions / Activities** are planned:

Mass awareness and e-waste collection drive in all the 31 Districts of Karnataka engaging various stakeholders.

Workshops, online awareness sessions, audio announcements, engagement through social media such as Twitter, Instagram, Facebook, Radio and TV Interviews is extensively planned to get maximum coverage on the awareness drive.

Awareness jingle on e-waste issues and collection will be played in all the ULB (Urban Local Body) waste vehicles sensitizing general public

Once the e-waste collection is done at community or ULB, the details are entered into e-waste pick up app https://rb.gy/cknze1. Based on this, logistics are planned with a confirmation message on the pick-up date.

Every Saturday, separate vehicle is organized for collection for e-waste by the ULB and collected e-waste is stored at their ULB office.

An awareness posters and SOP for conducting the drive will be shared with all RWAs , educational institutions through different forums.

**Reliance store** will print awareness posters and display in all their stores and delivery vehicles across Karnataka during. Awareness audios will also be played in their stores.

**Karo sambhav** will provide 4 mobile vans with awareness posters in Mysore every Saturday to boost the awareness message in Mysore region using Social Media

**Saahas zero waste** will provide a vehicle with awareness posters and audio for everyone in Bengaluru, everyday except Sundays. If required additional vehicles will be provided to cater to the demand.

**Sogo Ewaste Management** will be the recycling partner and support the collection and recycling of all the e-waste material collected.

End of the month all the stakeholders will submit a report on the drive and collection

We request all residents of Karnataka and all other stakeholders to support the KSPCB and their partners in this unique step. Please reach out Helpline Number : 080 25582559 or Tollfree Number : 1 800 258 6676/1 800 212 1434 for further details.

## ಕೃಷಿ ಬೆಲೆ ಆಯೋಗದ 2020-21 ನೇ ಸಾಲಿನ ಕೃಷಿ ಹಾಗೂ ತೋಟಗಾರಿಕಾ ಬೆಳೆಗಳ ವರದಿ

ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ) :

ರಾಜ್ಯದ ಕೃಷಿ ಹಾಗೂ ತೋಟಗಾರಿಕಾ ವಿಶ್ವವಿದ್ಯಾನಿಲಯಗಳ COCMIC ಘಟಕಗಳ ಸಹಯೋಗದೊಂದಿಗೆ 27 ಕೃಷಿ ಹಾಗೂ ತೋಟಗಾರಿಕಾ ಬೆಳೆಗಳ ಸಾಗುವಳಿ ವೆಚ್ಚವನ್ನು ಸಮೀಕ್ಷೆ ಮೂಲಕ ಲೆಕ್ಕಾಚಾರ ಹಾಕಲಾಗಿರುತ್ತದೆ.

ಸಮೀಕ್ಷೆಯಲ್ಲಿ ರಾಜ್ಯದ 383 ಅತಿ ಸಣ್ಣ ರೈತರು, 575 ಸಣ್ಣ ರೈತರು, 589 ಅರೆ ಮಧ್ಯಮ ರೈತರು, 358 ಮಧ್ಯಮ ರೈತರು ಹಾಗೂ 90 ದೊಡ್ಡ ರೈತರು ಒಟ್ಟಾರೆ 1995 ರೈತರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿರುತ್ತದೆ.

**ವಿಸ್ತೀರ್ಣ:** ಆರ್ಥಿಕ ಹಾಗೂ ಸಾಂಖ್ಯಿಕ ಇಲಾಖೆಯ 4ನೇ ಅಂದಾಜಿನಂತೆ 2020-21ನೇ ಸಾಲಿನಲ್ಲಿ 99.07 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 194.30 ಲಕ್ಷ ಟನ್ ಕೃಷಿ ಉತ್ಪನ್ನಗಳನ್ನು ಹಾಗೂ 19.56 ಲಕ್ಷ ಹೆಕ್ಟೇರ್‌ನಲ್ಲಿ 165.82 ಲಕ್ಷ ಟನ್ ಪ್ರಮುಖ ತೋಟಗಾರಿಕಾ ಉತ್ಪನ್ನಗಳನ್ನು ಬೆಳೆಯಲಾಗಿದೆ.

**ಬೆಂಬಲ ಬೆಲೆ ಘೋಷಣೆ:** ಕೇಂದ್ರ ಸರ್ಕಾರ 2021-22ರ ಮುಂಗಾರು ಹಾಗೂ 2022-23ರ ಹಿಂಗಾರಿಗೆ ವೆಚ್ಚ $A_2$+FL ಪರಿಗಣಿಸಿ ಶೇ.50ರಷ್ಟು ಲಾಭಾಂಶ ಸೇರಿಸಿ ಬೆಂಬಲ ಬೆಲೆ ಘೋಷಿಸಿರುತ್ತದೆ.

ಒಟ್ಟು ವೆಚ್ಚ (ವೆಚ್ಚ $C_2$)ದ ಮೇಲೆ ಶೇ.50ರಷ್ಟನ್ನು ಸೇರಿಸಿ ಕೃಷಿ ಉತ್ಪನ್ನಗಳ ಬೆಂಬಲ ಬೆಲೆ ನಿರ್ಧರಿಸಬೇಕೆನ್ನುವುದು ರೈತರ ಹಕ್ಕೊತ್ತಾಯವಾಗಿದೆ ಹಾಗೂ ಸನ್ಮಾನ್ಯ ಪ್ರಧಾನ ಮಂತ್ರಿಗಳ ರೈತರ ಆದಾಯ ದ್ವಿಗುಣಗೊಳಿಸಬೇಕೆನ್ನುವ ಮಹತ್ವಾಕಾಂಕ್ಷೆಗೆ ಪೂರಕವಾಗಲಿದೆ.

ರಾಜ್ಯದಲ್ಲಿ ಕೃಷಿ ಬೆಳೆಗಳಲ್ಲಿ ಕೇಂದ್ರ ಸರ್ಕಾರ ಘೋಷಿತ ಬೆಂಬಲ ಬೆಲೆಯು ಶೇ.50ರಷ್ಟು ಲಾಭಾಂಶ ಹೊಂದಿದೆ ಎಂದು ಪ್ರತಿಪಾದಿಸಲಾಗುತ್ತಿದ್ದು, ವಾಸ್ತವವಾಗಿ ಆಯೋಗದ ಸಮೀಕ್ಷಾ ರೈತರ ವೆಚ್ಚ ಪರಿಗಣಿಸಿದಾಗ ಏಕದಳ ಧಾನ್ಯಗಳಲ್ಲಿ ಶೇ.18-ಶೇ.30, ದ್ವಿದಳ ಧಾನ್ಯಗಳಲ್ಲಿ ಶೇ.22-ಶೇ.24ರಷ್ಟು ಮತ್ತು ಎಣ್ಣೆ ಕಾಳುಗಳಲ್ಲಿ ಶೇ.0.26 -ಶೇ.4ರಷ್ಟು ಮಾತ್ರ ಲಾಭಾಂಶವಿರುತ್ತದೆ.

**ಕೃಷಿ ಪರಿಕರ ಬಳಕೆ ಮತ್ತು ಇಳುವರಿ :** ಸಮೀಕ್ಷಾ ರೈತರ FYM ಬಳಕೆಯು ಶೇ.50- ಶೇ.80ರಷ್ಟು ಕಡಿಮೆಯಿರುತ್ತದೆ. ಇದರಿಂದಾಗಿ ಸಾವಯವ ಇಂಗಾಲ ಭೂಮಿಯಲ್ಲಿ ಕಡಿಮೆಯಾಗಿರುವುದು ಕಂಡುಬರುತ್ತದೆ. ರಸಾಯನಿಕ ಗೊಬ್ಬರ ಬಳಕೆ ಪ್ರಮಾಣ ಶೇ.50-ಶೇ.150ರಷ್ಟು ಹೆಚ್ಚಿರುತ್ತದೆ.

**ಕೃಷಿ ಯಾಂತ್ರೀಕರಣ - ಇಂಧನ ಬೆಲೆ - ಸಾಗುವಳಿ ವೆಚ್ಚದ ಏರಿಳಿತ :** ಕೃಷಿ ಯಂತ್ರಗಳಿಂದ ಸಮಯ ಪಾಲನೆ ಸಾಧ್ಯವಾಗಿ ಇಳುವರಿಯ ಮೇಲೆ ಧನಾತ್ಮಕ ಪರಿಣಾಮ ಉಂಟಾಗಿದೆ. ಇತ್ತೀಚಿಗೆ ಡೀಸೆಲ್/ಪೆಟ್ರೋಲ್ ಬೆಲೆ ಏರಿಕೆಯಿಂದಾಗಿ ಯಂತ್ರಗಳ ಬಾಡಿಗೆ ಹೆಚ್ಚಾಗಿದ್ದು, ಯಂತ್ರಗಳ ವೆಚ್ಚದ ಬಾಬ್ತಿನಲ್ಲಿ ಶೇ.24ರಷ್ಟು ಹೆಚ್ಚಾಗಿದ್ದು, ಒಟ್ಟಾರೆ ಸಾಗುವಳಿ ವೆಚ್ಚದಲ್ಲಿ ಶೇ.5ರಷ್ಟು ಹೆಚ್ಚಳವಾಗಿರುತ್ತದೆ.

**ಕರ್ನಾಟಕದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ :** ಬೆಲೆ ಏರಿಳಿತ ತಪ್ಪಿಸಲು ಮತ್ತು ಪೂರೈಕೆ ಸರಪಳಿ ನಿರ್ವಹಿಸಲು, ಅಡಮಾನ ಸಾಲ ಯೋಜನೆಯು ಉತ್ತಮ ಕ್ರಮವಾಗಿದ್ದು ರೈತಸ್ನೇಹಿಯಾಗಬೇಕು. ಬೆಲೆ ಮುನ್ನಂದಾಜು ಮೂಲಕ ಬೆಳೆ ಯೋಜನೆ ಸಾಧಿಸುವುದು. ಪಡಿತರ ವ್ಯವಸ್ಥೆಗೆ ಅವಶ್ಯಕವಿರುವ ಆಹಾರಧಾನ್ಯಗಳನ್ನು ಖರೀದಿಸುವುದು.

ರಾಜ್ಯದಲ್ಲಿ ಒಟ್ಟು 162 ಮುಖ್ಯ ಮಾರುಕಟ್ಟೆಗಳು ಮತ್ತು 352 ಉಪಮಾರುಕಟ್ಟೆಗಳು ಮಾರಾಟ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿವೆ. 2021–22ರಲ್ಲಿ ಒಟ್ಟು ಉತ್ಪಾದನೆಯ ಶೇ.21ರಷ್ಟು ಪ್ರಮಾಣ ಮಾತ್ರ ಮಾರುಕಟ್ಟೆಯಲ್ಲಿ ಮಾರಾಟವಾಗಿದೆ. ಬೆಂಬಲ ಬೆಲೆಗಿಂತಲೂ ಹೆಚ್ಚಿನ ಬೆಲೆಯಲ್ಲಿ 13 ಲಕ್ಷ ಟನ್ ಉತ್ಪನ್ನ ಮಾತ್ರ ಎಪಿಎಂಸಿಯಲ್ಲಿ ಮಾರಾಟವಾಗಿರುತ್ತದೆ. ಮಾರುಕಟ್ಟೆ ಶುಲ್ಕ 2019–20ರಲ್ಲಿ ರೂ.618 ಕೋಟಿಯಿಂದ 2020–21ರಲ್ಲಿ ಕೇವಲ ರೂ.294 ಕೋಟಿ ಸಂಗ್ರಹಣೆಯಾಗಿ ಶೇ.48ರಷ್ಟು ಕಡಿಮೆಯಾಗಿದೆ, ಇದರಿಂದಾಗಿ ಎಪಿಎಂಸಿಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿವೆ.

**ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳ ಬೆಲೆ ಪ್ರಸರಣ :** ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಬೆಲೆ ಪ್ರಸರಣ ಸಮೀಕ್ಷೆಯಲ್ಲಿ ಗ್ರಾಹಕರ ಬೆಲೆಗೆ ಹೋಲಿಸಿದಾಗ ರೈತರ ಪಾಲು ಟೊಮೆಟೊದಲ್ಲಿ ಕನಿಷ್ಠ ಶೇ.31ರಷ್ಟು ಇದ್ದು, ಜೋಳದಲ್ಲಿ ಗರಿಷ್ಠ ಶೇ.70ರಷ್ಟು ಇರುತ್ತದೆ. ರೈತರ ಆದಾಯ ಹಾಗೂ ಉತ್ಪಾದನೆ ಸುಸ್ಥಿರಗೊಳಿಸಲು ಗ್ರಾಹಕರು ನೀಡುವ ಬೆಲೆಯಲ್ಲಿ ಉತ್ಪಾದಕರಿಗೆ ಹೆಚ್ಚಿನ ಪಾಲು ದೊರಕಬೇಕಾಗುತ್ತದೆ. ಏಕದಳ ಧಾನ್ಯಗಳ ಪೈಕಿ ಭತ್ತದಲ್ಲಿ, ಹೊಸ ಭತ್ತಕ್ಕೆ ಶೇ.60 ರಷ್ಟು ಹಾಗೂ ಹಳೆಯ ಭತ್ತಕ್ಕೆ ಶೇ.70 ರಷ್ಟು, ರಾಗಿ/ಜೋಳದಲ್ಲಿ ಶೇ.80 ರಷ್ಟು, ಮುಸುಕಿನಜೋಳದಲ್ಲಿ ಶೇ.70 ರಷ್ಟು, ಸಜ್ಜೆಯಲ್ಲಿ ಶೇ.70 ರಷ್ಟು, ದ್ವಿದಳ ಧಾನ್ಯಗಳಲ್ಲಿ ಶೇ.80 ರಷ್ಟು, ತರಕಾರಿಗಳಲ್ಲಿ ಶೇ.60 ರಷ್ಟಾದರೂ ಗ್ರಾಹಕರ ಬೆಲೆ ರೈತರಿಗೆ ದೊರಕುವುದು ನ್ಯಾಯ ಸಮ್ಮತವಾಗಿರುತ್ತದೆ ಎಂದು ಅಭಿಪ್ರಾಯ ಪಡೆಯಲಾಗಿದೆ.

**ಆತ್ಮನಿರ್ಭರ ಭಾರತ– ಸ್ವಾವಲಂಬಿ ಕರ್ನಾಟಕ :** ರಾಜ್ಯದ ರೈತರ ಅವಿರತ ಪರಿಶ್ರಮದಿಂದ ಏಕದಳ ಧಾನ್ಯಗಳಾದ ರಾಗಿ ಮತ್ತು ಮುಸುಕಿನ ಜೋಳದಲ್ಲಿ, ಎಣ್ಣೆಕಾಳು ಬೆಳೆಯಾದ ಸೂರ್ಯಕಾಂತಿಯಲ್ಲಿ, ತೋಟಗಾರಿಕಾ ಬೆಳೆಗಳಾದ ಬಾಳೆ, ಅಡಿಕೆ ಮತ್ತು ಶುಂಠಿ ಇವುಗಳಲ್ಲಿ ರಾಷ್ಟ್ರದಲ್ಲೇ ಮೊದಲ ಸ್ಥಾನವನ್ನು ಪಡೆದಿರುವುದಲ್ಲದೆ, ಹಾಲು, ಜೋಳ, ತೊಗರಿ, ಒಣಮೆಣಸಿನಕಾಯಿ, ಈರುಳ್ಳಿ, ದ್ರಾಕ್ಷಿ, ತೆಂಗು ಮತ್ತು ಕರಿಮೆಣಸು ಬೆಳೆಗಳ ಉತ್ಪಾದನೆಯಲ್ಲಿ ದ್ವಿತೀಯ ಸ್ಥಾನ ಪಡೆದಿವೆ. ಉಳಿದಂತೆ ಕಬ್ಬು ಉತ್ಪಾದನೆಯಲ್ಲಿ ಮೂರನೇ ಸ್ಥಾನ ಮತ್ತು ಹೂವಿನ ಉತ್ಪಾದನೆಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಸ್ವಾವಲಂಬಿ ಕರ್ನಾಟಕವನ್ನಾಗಿಸಲು ಕೊರತೆ ಉತ್ಪನ್ನಗಳ ಉತ್ಪಾದನೆ ಹೆಚ್ಚಿಸಬೇಕಾಗಿದೆ. ಭತ್ತ, ಜೋಳ, ಎಣ್ಣೆಕಾಳುಗಳ ಉತ್ಪಾದನೆ ಹೆಚ್ಚಿಸಬೇಕಾಗಿದೆ. ರೈತರ ಆದಾಯ ವೃದ್ಧಿಸಲು ಸಮಗ್ರ ಕೃಷಿ ಪದ್ಧತಿ ಮತ್ತು ಗ್ರಾಮೀಣ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಬೇಕಾಗಿದೆ. "ಆಧುನಿಕ ತಂತ್ರಜ್ಞಾನ– ಸ್ವಾವಲಂಬಿ ರೈತ – ಸ್ವಾವಲಂಬಿ ಗ್ರಾಮಗಳು – ಗ್ರಾಮೀಣ ಉದ್ಯಮಿಗಳ ಉದ್ಯಮಶೀಲತೆ – ಸ್ವಾವಲಂಬಿ ಕರ್ನಾಟಕ"

**ಬೆಳೆ ವಿಮೆ :** ಬೆಳೆ ಗಂಡಾಂತರ ಎದುರಿಸಲು ಬೆಳೆ ವಿಮೆ ಅತ್ಯುತ್ತಮ ಪರಿಹಾರವಾಗಿದೆ. 2016–17ರ ಮುಂಗಾರು ಹಂಗಾಮಿನಲ್ಲಿ ಕಂತಿನ ಮೊತ್ತಕ್ಕಿಂತ ಪರಿಹಾರ ಮೊತ್ತ ಹೆಚ್ಚಾಗಿದ್ದು, ಮಿಕ್ಕುಳಿದ ವರ್ಷಗಳಲ್ಲಿ ಪರಿಹಾರ ಮೊತ್ತ ಕಡಿಮೆಯಾಗಿದೆ. ಬೆಳೆ ವಿಮೆಯಲ್ಲಿ ನೋಂದಾಯಿತ 2016–17 ರಿಂದ 2020–21ನ್ನು ಗಮನಿಸಿದಾಗ ರೈತರ ಸಂಖ್ಯೆ 21 ಲಕ್ಷದಿಂದ 15 ಲಕ್ಷಕ್ಕೆ ಇಳಿದಿರುವುದು ಆಶಾದಾಯಕ ಬೆಳವಣಿಗೆಯಾಗಿರುವುದಿಲ್ಲ. ಹವಾಮಾನ ಆಧಾರಿತ ಬೆಳೆ ವಿಮೆಯಲ್ಲಿ ನೋಂದಾಯಿತ ರೈತರ ಸಂಖ್ಯೆ 99 ಸಾವಿರ ರಿಂದ 3 ಲಕ್ಷಕ್ಕೆ ಹೆಚ್ಚಾಗಿರುವುದು ಉತ್ತಮ ಬೆಳವಣಿಗೆಯಾಗಿದೆ. ಬೆಳೆ ವಿಮೆ ಯೋಜನೆ ರೈತ ಸ್ನೇಹಿಯಾಗಿಸಲು ಪರಿಹಾರ ವಿಳಂಬ ತಪ್ಪಿಸುವುದು ಸೂಕ್ತ.

**ಬೆಳೆ ಶಿಫಾರಸ್ಸುಗಳು**

**ನೀರಾವರಿ :** ನಾಲೆಗಳನ್ನು ಆಧುನೀಕರಿಸಿ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸುವುದು ಹಾಗೂ ರೈತರು ತಮ್ಮ ಜಮೀನುಗಳಲ್ಲಿ ಬೀಳುವ ಮಳೆ ನೀರನ್ನು ಸ್ವಲ್ಪವು ಪೋಲಾಗದಂತೆ ಸಂರಕ್ಷಿಸಿಕೊಳ್ಳಲು **"ಹೊಲಕ್ಕೊಂದು ಕೆರೆ"** ಅಥವಾ **"ಕೃಷಿ ಹೊಂಡ"** ನಿರ್ಮಿಸಿಕೊಳ್ಳಲು ಪ್ರೋತ್ಸಾಹಕ ಕ್ರಮ ಕೈಗೊಳ್ಳಬೇಕಾಗಿದೆ.

**ರೈತರ ಸಂಶೋಧನೆಗಳಿಗಾಗಿ ಪ್ರೋತ್ಸಾಹದಾಯಕ ಕ್ರಮ :** ರೈತ ಸಂಶೋಧಕರು ಆವಿಷ್ಕಾರಗೊಳಿಸಿರುವ ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಲು "ರೈತ ಆವಿಷ್ಕಾರ ನಿಧಿ"ಯನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕಡ್ಡಾಯವಾಗಿ ಸ್ಥಾಪಿಸುವುದು ಸೂಕ್ತ.

**ಬೆಲೆ ಶಿಫಾರಸ್ಸುಗಳು**

**1. ಕೃಷಿ ಉತ್ಪಾದನಾ ವೆಚ್ಚದ ಲೆಕ್ಕಾಚಾರ :** ಮಣ್ಣಿನ ಆರೋಗ್ಯ ಕಾಪಾಡಲು ರೈತರು ಅನೇಕ ವೆಚ್ಚಗಳನ್ನು ಭರಿಸಬೇಕಾಗುತ್ತದೆ. ಆದ್ದರಿಂದ ಬೆಂಬಲ ಬೆಲೆ ಶಿಪಾರಸ್ಸು ಮಾಡಲು CACPಯು ವೆಚ್ಚ $A_2$+FL ಲೆಕ್ಕಾಚಾರದ ಬದಲಾಗಿ ವೆಚ್ಚ $C_2$ ಪರಿಗಣಿಸುವುದು ಸೂಕ್ತವಾಗಿರುತ್ತದೆ.

**2. ಕೃಷಿ ಉತ್ಪನ್ನಗಳ ಬೆಲೆ – ರೈತರ ಆದಾಯ :** ರೈತರು ಒತ್ತಾಯಿಸುತ್ತಿರುವ ಬೆಲೆ, ಕೃಷಿ ಉತ್ಪನ್ನಗಳ ಖರ್ಚಾಧಾರಿತವಾಗಿರಬೇಕು. ಅಲ್ಲದೆ 1969ನ್ನು ಬ್ಯಾಂಕುಗಳು ರಾಷ್ಟ್ರೀಕೃತವಾದ ಮೂಲ ವರ್ಷವಾಗಿರಿಸಿಕೊಂಡು ಕೃಷಿ ವಸ್ತುಗಳ ಮತ್ತು ಕಾರ್ಖಾನೆ ವಸ್ತುಗಳ ಬೆಲೆ ಸಮತೋಲನ ಕಾಪಾಡುವಂತಿರಬೇಕು.

**3. ಉಲ್ಲೇಖ ಬೆಲೆ :** ಎಪಿಎಂಸಿಯಲ್ಲಿ ಮತ್ತು ಎಪಿಎಂಸಿ ಹೊರ ಭಾಗದಲ್ಲಿಯ ಎಲ್ಲಾ ವ್ಯವಹಾರ ವಹಿವಾಟುಗಳಿಗೆ ಕೇಂದ್ರ ಸರ್ಕಾರ ಘೋಷಿತ ಬೆಂಬಲ ಬೆಲೆಯನ್ನು (MSP) ಉಲ್ಲೇಖ ಬೆಲೆ (Reference Price) ಆಗಿ ಪರಿಗಣಿಸುವುದು ಸೂಕ್ತ. ಇದಕ್ಕಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಬೆಂಬಲ ಬೆಲೆಯನ್ನು (MSP) ಉಲ್ಲೇಖ ಬೆಲೆ (Reference Price) ಎಂದು ಪರಿಗಣಿಸುವಂತೆ ಕಾಯಿದೆ ರೂಪಿಸಲು ಶಿಫಾರಸ್ಸು ಮಾಡಬೇಕು.

**4. ಕನಿಷ್ಠ ಬೆಂಬಲ ಬೆಲೆ ಘೋಷಣೆ ಮತ್ತು ಖರೀದಿ :** FAQ ಗುಣಮಟ್ಟಕ್ಕಿಂತಲೂ ಕಡಿಮೆ ಗುಣಮಟ್ಟದ ಉತ್ಪನ್ನಗಳಿಗೂ ಕನಿಷ್ಠ ಬೆಂಬಲ ಬೆಲೆ ನಿಗದಿಗೊಳಿಸಿ ಘೋಷಿಸಿದಲ್ಲಿ ಮಾರುಕಟ್ಟೆಯಲ್ಲಿ ರೈತರಿಗೆ ನಿರ್ದಿಷ್ಟ ಬೆಲೆ ದೊರಕಲಿದೆ.

**ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (NFSA) ಯನ್ವಯ** ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ವಿತರಿಸಲಾಗುವ ಭತ್ತ, ಜೋಳ, ರಾಗಿ ಆಹಾರಧಾನ್ಯಗಳನ್ನು ಬೆಂಬಲ ಬೆಲೆಯಲ್ಲಿ ಖರೀದಿಸಿ, ರಾಜ್ಯದಲ್ಲಿಯ ಪಡಿತರ ವ್ಯವಸ್ಥೆಯ ಫಲಾನುಭವಿಗಳಿಗೆ ಹಂಚುವುದು ಅತ್ಯಂತ ಸೂಕ್ತ ಮತ್ತು ಅವಶ್ಯಕವಾಗಿರುತ್ತದೆ.

ಕೇಂದ್ರ ಸರ್ಕಾರ NFSA ಅಡಿಯಲ್ಲಿ ಪಡಿತರ ವ್ಯವಸ್ಥೆಗೆ ಖರೀದಿಸುವ ಆಹಾರಧಾನ್ಯಗಳ ಖರೀದಿ, ಸಾಗಾಣೆ, ಸಂಗ್ರಹಣೆ ಸಂಸ್ಕರಣೆ, ವಿತರಣೆ ವೆಚ್ಚವನ್ನು ಭರಿಸುತ್ತಿದ್ದು, ರೈತರಿಗೆ ನಿರ್ದಿಷ್ಟ ಬೆಲೆ ಪಡಿತರದಾರರಿಗೆ ಪೌಷ್ಠಿಕಾಂಶ ಆಹಾರಧಾನ್ಯ ದೊರಕಿ, ರಾಜ್ಯದ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಿದಂತಾಗುತ್ತದೆ.

**ಕೇಂದ್ರ ಸರ್ಕಾರದ Umbrella ಯೋಜನೆಗಳಾದ (PM –AASHA) ಯೋಜನೆಯಡಿ ಬೆಂಬಲ ಬೆಲೆಯಲ್ಲಿ ಖರೀದಿ ಯೋಜನೆ (PSS):** ಕೊಯ್ಲು ಪ್ರಾರಂಭಕ್ಕೆ ಮುಂಚಿತವಾಗಿ ಕೇಂದ್ರದ ಅನುಮೋದನೆ ಪಡೆದು ಪೂರ್ವ ಸಿದ್ಧತೆಗಳೊಂದಿಗೆ ಹಂಗಾಮಿಗೆ ಅನುಗುಣವಾಗಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಬೇಕು.

5. **ಬೆಳೆ ಯೋಜನೆ – ಬೆಲೆ ಏರಿಳಿತ ತಪ್ಪಿಸಲು – ಆದಾಯ ಸುಸ್ಥಿರತೆ ಸಾಧಿಸಲು – ಬೆಲೆ ಮುನ್ನಂದಾಜು** ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಹವಾಗುಣ, ಉತ್ಪಾದನೆ, ಬೇಡಿಕೆ ಮುಂತಾದವುಗಳನ್ನೊಳಗೊಂಡ ತಂತ್ರಾಂಶವನ್ನು ಇ – ಆಡಳಿತ (e-Governance) ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿ, ಮಾರುಕಟ್ಟೆ ಬೆಲೆಗಳ ಮುನ್ಸೂಚನೆ ಮಾಹಿತಿಯನ್ನು ಬೆಳೆ ಬಿತ್ತನೆಗೆ ಗಿಂತಲೂ ಮುಂಚಿತವಾಗಿ ನೀಡಿದಲ್ಲಿ ರೈತರು ಲಾಭದಾಯಕ ಬೆಳೆ ಯೋಜನೆಯನ್ನು ಅನುಸರಿಸಲು ಸಾಧ್ಯವಾಗಲಿದೆ.

**6. ಬೆಳೆ ಯೋಜನೆ – ಸಾಧಿಸಲು ಪ್ರೋತ್ಸಾಹದಾಯಕ ಕ್ರಮಕ್ಕೆ –** ಕೇಂದ್ರ ಸರ್ಕಾರದ ಕಿಸಾನ್ ಸಮ್ಮಾನ್ ಯೋಜನೆಯಲ್ಲಿ ವಾರ್ಷಿಕವಾಗಿ ರೂ.6000 ಗಳನ್ನು ರೂ.10,000 ಗಳಿಗೆ ಹೆಚ್ಚಿಸಿ, ಎರಡು ಕಂತುಗಳಲ್ಲಿ ರೈತರ ಖಾತೆಗೆ ವರ್ಗಾಯಿಸುವಂತೆ

ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತ. ರಾಜ್ಯ ಸರ್ಕಾರವು ರೈತ ಸಮ್ಮಾನ್ ಯೋಜನೆಯಲ್ಲಿ ವಾರ್ಷಿಕವಾಗಿ ರೂ.4000 ಗಳನ್ನು ರೂ.6000ಗಳಿಗೆ ಹೆಚ್ಚಿಸಿ, ಎರಡು ಕಂತುಗಳಲ್ಲಿ ರೈತರ ಖಾತೆಗೆ ವರ್ಗಾಯಿಸುವುದು ಸೂಕ್ತ.

**7. ಕೃಷಿ ಉತ್ಪನ್ನಗಳ ಬೆಲೆ ಏರಿಳಿತ ತಪ್ಪಿಸಲು ಅಡಮಾನ ಸಾಲ –** ಕೃಷಿ ಉತ್ಪನ್ನಗಳನ್ನು ಅಡಮಾನವಾಗಿಟ್ಟು ರೈತರು ಸಾಲ ಪಡೆದಲ್ಲಿ ಆರ್‌ಬಿಐ ನಿಯಾಮಾವಳಿ ಹಾಗೂ ನೀತಿ ಆಯೋಗದ ಸಲಹೆಗಳನ್ವಯ ರಿಯಾಯ್ತಿ ಬಡ್ಡಿದರ ವಿಧಿಸಲು ಕಡ್ಡಾಯಗೊಳಿಸಬೇಕು ಹಾಗೂ ಖರೀದಿದಾರರಿಗೂ, ಸಂಗ್ರಹಣಾಗಾರರಿಗೂ ಬ್ಯಾಂಕ್‌ಗಳು ಅಡಮಾನ ಸಾಲ ನೀಡುವಂತಾಗಬೇಕು.

**8. ತೋಟಗಾರಿಕಾ ಮಾರಾಟ ಮಹಾ ಮಂಡಳ ಕುರಿತು** ರೈತರಿಗೆ ಯೋಗ್ಯ ಬೆಲೆ ಹಾಗೂ ಗ್ರಾಹಕರಿಗೆ ನಿರ್ದಿಷ್ಟ ಬೆಲೆ ದೊರಕುವಂತಾಗಲು NDBB / KMF ಮಾದರಿಯಲ್ಲಿ ಈಗಿರುವ KHF ಉನ್ನತೀಕರಿಸಿ "ಕರ್ನಾಟಕ ತೋಟಗಾರಿಕಾ ಮಾರಾಟ ಮಹಾ ಮಂಡಳ" ಸ್ಥಾಪನೆ ಮಾಡುವುದು ಅತ್ಯವಶ್ಯಕವಾಗಿದೆ.

**9. ರೈತರ ಚೌಕಾಸಿ ಸಾಮರ್ಥ್ಯ ಕುರಿತು** ಕೃಷಿ ಹಾಗೂ ತೋಟಗಾರಿಕಾ ವಿಶ್ವವಿದ್ಯಾಲಯಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳು ರೈತ ಉತ್ಪಾದಕ ಗುಂಪುಗಳಿಗೆ ಕೊಯ್ಲು ನಂತರದ ತಂತ್ರಜ್ಞಾನ, ಕಡಿಮೆ ವೆಚ್ಚದಲ್ಲಿ ಉತ್ಪಾದನೆ, ಯಾಂತ್ರೀಕರಣ ಬಳಕೆ, ಸಂಸ್ಕರಣೆ ಹಾಗೂ ಇತರೆ ತಂತ್ರಜ್ಞಾನಗಳ ಬಗ್ಗೆ ಪ್ರಾತ್ಯಕ್ಷಿತೆಯೊಂದಿಗೆ ರೈತರಿಗೆ ಉಪಯೋಗವಾಗುವ ಮಾಹಿತಿ ಒದಗಿಸಲು ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಬೇಕು.

**10. ಕೃಷಿ ಉತ್ಪನ್ನಗಳ ಆಮದು ಮತ್ತು ರಫ್ತು ಸಂಬಂಧಿಸಿದಂತೆ** APEDA & KAPPEC ಸಂಸ್ಥೆಗಳು ರಾಜ್ಯದಿಂದ ರಫ್ತು ಮಾಡಲು ಇರುವ ವಿಪುಲ ಅವಕಾಶಗಳ ಕುರಿತು ಅಧ್ಯಯನ ಮಾಡಿ FPO ಗಳಿಗೆ ಹಾಗೂ ಸಹಕಾರ ಸಂಘ ಸಂಸ್ಥೆಗಳಿಗೆ ಮತ್ತು ರಫ್ತುದಾರರಿಗೆ ಮಾಹಿತಿ ನೀಡುವುದಲ್ಲದೆ, ಕಾಲಕಾಲಕ್ಕೆ ಅವಶ್ಯಕವಿರುವ ದೇಶೀಯ ಹಾಗೂ ಅಂತರಾಷ್ಟ್ರೀಯ ಪೂರೈಕೆ ಮತ್ತು ಬೇಡಿಕೆ ಮಾಹಿತಿ ನೀಡುವುದರ ಜೊತೆಗೆ ರಫ್ತು ಉತ್ತೇಜಿಸಲು ಬೇಕಾಗುವ ಅಗತ್ಯ ತರಬೇತಿಗಳನ್ನು ನೀಡಬೇಕು.

## ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ

ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ) :

**ದಿನಾಂಕ: 24.11.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 50 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 77 | ತೃಪ್ತಿಕರ | $NO_2$ |
| 3 | ಕವಿಕ, ಮೈಸೂರುರಸ್ತೆ | 100 | ತೃಪ್ತಿಕರ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 47 | ಉತ್ತಮ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 43 | ಉತ್ತಮ | O3 |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 104 | ಸಾಧಾರಣ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, | 42 | ಉತ್ತಮ | $PM_{10}$ |

| (24.11.2021 at 10.05 AM) | | | | |
|---|---|---|---|---|
| 8 | BWSSB,ಕಾಡಬೀಸನಹಳ್ಳಿ | 51 | ತೃಪ್ತಿಕರ | $NO_2$ |
| 9 | ಪೀಣ್ಯ | 60 | ತೃಪ್ತಿಕರ | $PM_{2.5}$ |
| 10 | ಬಿಟಿಎಂ ಲೇಔಟ್ | 50 | ಉತ್ತಮ | CO |

| ವರ್ಗ(ಶ್ರೇಣಿ) | ಉಂಟಾಗಬಹುದಾದ ಆರೋಗ್ಯ ಪರಿಣಾಮಗಳು |
|---|---|
| ಉತ್ತಮ (0–50) | ಕನಿಷ್ಠ ಪರಿಣಾಮ |
| ತೃಪ್ತಿಕರ (51–100) | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| ಸಾಧಾರಣ (101–200) | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| ಕಳಪೆ (201–300) | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| ಅತಿ ಕಳಪೆ (301–400) | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| ತೀವ್ರ (>401) | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 24.11.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 50 | Good | $PM_{10}$ |
| 2 | Jayanagar 5th Block, Shalini ground | 77 | Satisfactory | $NO_2$ |
| 3 | KAVIKA, Mysore Road | 100 | Satisfactory | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 47 | Good | $PM_{10}$ |
| 5 | HSR Layout, near Central Silkboard | 43 | Good | O3 |
| 6 | City Railway Station, Magestic, Bengaluru | 104 | Moderate | $PM_{10}$ |

| | | | | |
|---|---|---|---|---|
| 7 | Saneguruvanahalli, NisargaBhavan, KSPCB, Shivanagara | 42 | Good | $PM_{10}$ |
| **(24.11.2021 at 10.05 AM)** | | | | |
| 8 | BWSSB, Kadabesanahalli | 51 | Satisfactory | $NO_2$ |
| 9 | Peenya | 60 | Satisfactory | $PM_{2.5}$ |
| 10 | BTM Layout | 50 | Good | CO |

| **Category (Range)** | **Possible Health Impacts** | **Category (Range)** | **Possible Health Impacts** |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older adults | Severe (>401) | Respiratory effects even on healthy people |